


1

**ಭವಿಷ್ಯ**

ಇಂದಿನ
ಮಕ್ಕಳೇ
ಮುಂದಿನ
ಪ್ರಜೆಗಳು!
ಇಂದಿನ
ಪ್ರಜೆಗಳೇ
ಮುಂದಿನ
ಮಂತ್ರಿಗಳು!
ಇಂದಿನ
ಮಂತ್ರಿಗಳೇ
ಮುಂದಿನ
ಕೈದಿಗಳು!

2

**ಸೂಕ್ತ!**

ಸಾವಿರಾರು
ಎಕರೆ
ಜಮೀನು
ಹೊಂದುವ
ಮೊದಲು
ಒಂದೇ
ಒಂದು
ನಿರೀಕ್ಷಣಾ
ಜಾಮೀನು
ಹೊಂದಿರುವುದೇ
ಸೂಕ್ತ!

3

**ಆಸರೆ!**

ಪಟಿಂಗನ
ಕೊನೆಯ
ಆಸರೆ
ರಾಜಕೀಯ!
ರಾಜಕಾರಣಿಯ
ಕೊನೆಯ
ಆಸರೆ
ನಿರೀಕ್ಷಣಾ
ಜಾಮೀನು!

–ಪಿ.ಜೆ.ರಾಘವೇಂದ್ರ,
ಮೈಸೂರು



ವರ: (ಬ್ರೋಕರ್‌ನ ಕಿವಿಯಲ್ಲಿ ಪಿಸುಗುಟ್ಟತೊಡಗಿದ...)
ಹುಡುಗಿ ತುಂಬಾ ಕಪ್ಪು, ದಪ್ಪ, ಹಲ್ಲುಬ್ಬು, ತುಟಿಯೂ ಕೂಡಾ ದಪ್ಪ...
ಬ್ರೋಕರ್: ಪರ್‍ವಾಗಿಲ್ಲಯ್ಯ ಹೆದರಬೇಡ, ಜೋರಾಗಿಯೇ ಹೇಳು. ಯಾಕೆಂದರೆ...? ಹುಡುಗಿಗೆ ಕಿವೀನೂ ಕೇಳ್ಸಲ್ಲ...!!



★★★

ಗಂಡ: ದೇವರು, ನಿನಗೆ ಎರಡು ಕಣ್ಣು ಕೊಟ್ಟಿದ್ದಾನೆ. ಅಕ್ಕಿಯಲ್ಲಿರೋ ಕಲ್ಲು ಆರಿಸೋಕೆ ಆಗಲ್ವಾ?
ಹೆಂಡ್ತಿ: ದೇವರು, ನಿಮಗೆ 32 ಹಲ್ಲು ಕೊಟ್ಟಿದ್ದಾನೆ. ಅನ್ನದಲ್ಲಿರುವ ಎರಡು ಕಲ್ಲು ಅಗಿಯೋಕೆ ಆಗ್ಲಿಲ್ವಾ...?

ಸಂಗ್ರಹ: ಮಣೇಗಾರ ಜಗನ್‌ಜ್ಯೋತಿ

ವ್ಯಕ್ತಿ: 'ಹೇಗೆನಿಸಿತು ಈ ಬಂಗ್ಲೆ?'
ಪ್ರವಾಸಿಗ: 'ಬಹಳ ಚೆನ್ನಾಗಿದೆ, ಆದರೆ ಕತ್ತಲೆಯಾಗಿದ್ದರಿಂದ ಭೂತ–ಗೀತ... ಅಂತ ಭಯ ಆಗ್ತಿತ್ತು.'
ವ್ಯಕ್ತಿ: 'ಛೆ, ಹಾಗೇನಿಲ್ಲ, ನಾನು ಇಲ್ಲಿ ಮುನ್ನೂರು ವರ್ಷಗಳಿಂದಲೂ ಇದ್ದೀನಿ!'



★★★

ಪುರೋಹಿತರು: 'ನಮ್ಮ ಮನೆ ಮುಂದೆ ಕತ್ತೆ ಸತ್ತುಬಿದ್ದಿದೆ.'
ನಗರಪಾಲಿಕೆ ಅಧಿಕಾರಿ: 'ಪುರೋಹಿತರೇ, ಸತ್ತವರ ಶವ ಸಂಸ್ಕಾರ ಮಾಡುವುದು ನಿಮ್ಮ ಕೆಲಸವಲ್ಲವೆ?'
ಪುರೋಹಿತರು: 'ಹೌದು. ನೀವು ಹೇಳಿದ್ದು ಸರಿ, ಆದರೂ ಮೊದಲು ಅದರ ಸಂಬಂಧಿಕರಿಗೆ ತಿಳಿಸಬೇಕಲ್ಲ, ಅದಕ್ಕೆ ಹೇಳಿದೆ!'

ಸಂಗ್ರಹ: ಶಂಕರೇಗೌಡ ತುಂಬಕೆರೆ